12

# ದೇವರ ಸ್ವಭಾವಸ್ವರೂಪಗಳು ಯಾವವು?

## ಆತನ ಪ್ರೀತಿ

ದೇವರ ಪ್ರಿತಿಯು ಕ್ರೈಸ್ತರ ಹೃದಯಗಳಲ್ಲಿ ಪರಿಶುದ್ಧಾತ್ಮನ ಮುಖಾಂತರ, ತನ್ನ ಅಗಲ, ಉದ್ದ, ಆಳ ಮತ್ತು ಎತ್ತರದೊಂದಿಗೆ ಸುರಿಸಲ್ಪಡುವಾಗ, ದೇವರ ಸಂಪೂರ್ಣತೆಯನ್ನು ತಿಳಿದುಕೊಳ್ಳುವಂತೆ ಮಾಡುವುದು (ರೋಮಾಪುರ 5:5; ಎಫೆಸ 3:18, 19). ಆತನ ಪ್ರೀತಿಯು ಮಾನವ ಗ್ರಹಿಕೆಯನ್ನು ಮೀರಿದ್ದಾಗಿದ್ದು, ಆಳವಾಗಿ ಮನಸ್ಸಿನೊಳಗೆ ಹೋಗುವ ಯಾವದೇ ಆಲೋಚನೆಯನ್ನು ದಾಟಿಹೋಗುವಂಥದ್ದು ಆಗಿದೆ. ಆತನ ಪ್ರಿತಿಯನ್ನು ಮೆಚ್ಚಿಕೊಳ್ಳಲು ಕೆಲವು ಉದಾಹರಣೆಗಳು ಸಹಾಯ ಮಾಡುತ್ತವೆ.

### ಪ್ರಾಣಿಗಳಿಗಾಗಿ ನಮ್ಮ ಪ್ರೀತಿಯಂತೆ

"ನೀತಿವಂತನು ತನ್ನ ಪ್ರಾಣಿಗಳ ಕ್ಷೇಮವನ್ನು ಲಕ್ಷಿಸುತ್ತಾನೆ; ಆದರೆ ದುಷ್ಟನ ವಾತ್ಸಲ್ಯವೋ ಕ್ರೂರತನವೇ" (ಜ್ಞಾನೋಕ್ತಿ 12:10). ನೀತಿವಂತ ಮನುಷ್ಯನು ತನ್ನ ಪ್ರಾಣಿಗಳಿಗಾಗಿ ಚಿಂತಿಸುತ್ತಾನೆ; ಅವನು ಅವುಗಳಿಗೆ ವಿಶ್ರಾಂತಿ ಕೊಡುತ್ತಾನೆ, ನೀರು ಕುಡಿಸುತ್ತಾನೆ, ಆಹಾರ ಕೊಡುತ್ತಾನೆ ಮತ್ತು ಯಾವುದೇ ತೊಂದರೆ ಯಾಗದಂತೆ ಕಾಪಾಡುತ್ತಾನೆ. ಪಕ್ಷಿಯನ್ನು, ನಾಯಿಯನ್ನು, ಬೆಕ್ಕನ್ನೂ ಇಲ್ಲವೇ ಹೋರಿಯನ್ನು ಸಾಕುವವರ ಬಗ್ಗೆ ಇದು ಸತ್ಯವಾಗಿದೆ. ಪ್ರಾಣಿಗಳ ಕಡೆಗೆ ತನ್ನ ಹೃದಯದಲ್ಲಿ ಪ್ರೀತಿಯ ಭಾವನೆಯುಳ್ಳವನಾಗಿರುವನೋ ಅದು ಮಾನವ ಜೀವಿಗಳ ಕಡೆಗೆ ದೇವರ ಭಾವನೆಯಂತೆ ಇರುವುದು.

ಕುದುರೆಯ ಇಲ್ಲವೇ ಹೇಸರಗತ್ತೆಯ ಅಲಂಕಾರಗಳು ಅವುಗಳನ್ನು ನಿಯಂತ್ರಿಸಲು "ಬಾರು ಕಡಿವಾಣಗಳನ್ನು" ಒಳಗೊಂಡಿರುವವು (ಕೀರ್ತನೆ 32:9). ದೇವರು ಮಾನವ ಜೀವಿಗಳಿಗೆ ದೈಹಿಕ ಬಂಧನಗಳನ್ನು (ಹಗ್ಗಗಳನ್ನು ಇಲ್ಲವೇ ನೂಲುಗಳನ್ನು) ಅನ್ವಯಿಸುವದಿಲ್ಲ ಆದರೆ "ಪ್ರೀತಿಯ ಬಂಧನ"ವನ್ನು ಹಾಕುತ್ತಾನೆ (ಹೋಶೇಯ 11:4). ದೇವರ ಕರುಣೆಯು (ರೋಮಾಪುರ 2:4), ಕುದುರೆಯ ಕಡಿವಾಣದಂತೆ, ದೇವರ ಚಿತ್ತವನ್ನು ಮಾಡಲು ಮಾನವರನ್ನು ನಡಿಸತಕ್ಕದ್ದು. ಕ್ರಿಸ್ತನ ಪ್ರೀತಿಯು (2 ಕೊರಿಂಥ 5:14), ಎತ್ತಿನ ನೊಗದಂತೆ ಜನರನ್ನು ಯಜಮಾನನಿಗಾಗಿ ಜೀವಿಸಲು ಒತ್ತಾಯ ಮಾಡುತ್ತದೆ.

"ದಯೆಯುಳ್ಳ ಯಜಮಾನರು, ತಮ್ಮ ಎತ್ತುಗಳು ಆರಾಮವಾಗಿ ತಮ್ಮ ಆಹಾರವನ್ನು ತಿನ್ನಲಿಕ್ಕಾಗುವಂತೆ ಅವುಗಳ ಮೇಲಿನ ನೊಗವನ್ನು ಸರಿಸುವವರಂತೆ"[1] ಪ್ರಾಣಿಯ ಯಜಮಾನರಲ್ಲಿ ಇರುವ ಭಾವನೆಯಂತೆ ದೇವರ ಪ್ರೀತಿಯು ಇರುವುದು "ನೊಗವನ್ನು ತಲೆಯ ಈಚೆಗೆ ತೆಗೆಯುವವರಂತೆ ನಾನು ಅವರನ್ನು ಸುದಾರಿಸಿ ಅವರಿಗೆ ತೀನಿಯನ್ನು ನಯದಿಂದ ಇಕ್ಕಿದೆನು" ಎಂದು ದೇವರು ಹೇಳಿದ್ದಾನೆ (ಹೋಶೇಯ 11:4).

**ಮಕ್ಕಳಿಗಾಗಿ ನಮ್ಮ ಪ್ರೀತಿಯಂತೆ**

ತನ್ನ ಸ್ವಂತ ಮಕ್ಕಳಿಗಾಗಿ ತಂದೆಗೆ ಚಿಂತನೆಯೂ ಜವಾಬ್ದಾರಿಕೆಯು ಇರಬೇಕೆಂಬುದು ಸಾರ್ವತ್ರಿಕವಾಗಿ ತಿಳಿದದ್ದಾಗಿದೆ. ಒಂದು ಸಮಯದಲ್ಲಿ ಮೋಶೆಯು ತನ್ನ ತಾಳ್ಮೆಯನ್ನು ಕಳೆದುಕೊಂಡು, ತಾನು ಇಸ್ರಾಯೇಲ್ಯರ ತಂದೆಯಾಗಿರದೇ ಇದ್ದುದರಿಂದ ತಂದೆ ಲಕ್ಷಿಸುವಂತೆ ಅವನಿಂದ ನಿರೀಕ್ಷಿಸಲ್ಪಡಬಾರದೆಂದು ವಾದಿಸಿದನು. "ನೀನು ನನಗೆ - ಕೂಸನ್ನು ಎತ್ತಿಕೊಂಡು ಹೋಗುವವನಂತೆ ಈ ಜನರನ್ನು ಉಡಿಲಲ್ಲಿಟ್ಟುಕೊಂಡು ನಾನು ಅವರ ಪಿತೃಗಳಿಗೆ ಪ್ರಮಾಣ ಮಾಡಿಕೊಟ್ಟ ದೇಶಕ್ಕೆ ಒಯ್ಯಿ ಎಂದು ಹೇಳುತ್ತೀಯಲ್ಲಾ, ನಾನು ಇವರಿಗೆ ಹೆತ್ತ ತಾಯಿಯೋ?" ಎಂದು ಕೇಳಿದನು (ಅರಣ್ಯಕಾಂಡ 11:12). ಇನ್ನೊಂದು ಕಡೆಯಲ್ಲಿ ತಾನು ಮಾರ್ಪಡಿಸಿದವರ ಕಡೆಗೆ ಪೌಲನು ತನ್ನ ಪ್ರೀತಿಯು ತಂದೆಯ ಪ್ರೀತಿ ಯಂತೆ ಇರುವುದೆಂದು ಹೇಳಿದನು: "ತಾಯಿಯು ತನ್ನ ಮಕ್ಕಳನ್ನು ಪೋಷಿಸುತ್ತಾಳೋ ಎಂಬಂತೆ ನಾವು ನಿಮ್ಮ ಮಧ್ಯದಲ್ಲಿ ನಡೆದು ಕೊಂಡೆವು ... ತಂದೆಯು ತನ್ನ ಮಕ್ಕಳಿಗೆ ಹೇಗೋ ಹಾಗೆಯೇ ನಾವು ನಿಮ್ಮಲ್ಲಿ ಪ್ರತಿಯೊಬ್ಬನಿಗೆ ಬುದ್ಧಿ ಹೇಳುತ್ತಾ, ಧೈರ್ಯಪಡಿಸುತ್ತಾ ... ಹೇಳುತ್ತಾ ಇದ್ದೆವು" (1 ಥೆಸಲೊನೀಕ 2:7-11).

ಇಸ್ರಾಯೇಲಿಗಾಗಿ ತನ್ನ ಪ್ರೀತಿಯನ್ನು ಚಿತ್ರಿಸುವಲ್ಲಿ ದೇವರು ಪಿತೃತ್ವದ ಉದಾಹರಣೆಯನ್ನು ಉಪಯೋಗಿಸಿದನು. "ಇಸ್ರಾಯೇಲು ಕೇವಲ ಬಾಲ್ಯದಲ್ಲಿದ್ದಾಗ ನಾನು ಅದರ ಮೇಲೆ ಪ್ರೀತಿಯಿಟ್ಟು ಆ ನನ್ನ ಮಗನನ್ನು ಐಗುಪ್ತದೇಶದಿಂದ ಕರೆದೆನು" (ಹೋಶೇಯ 11:1). ಆದಾಗ್ಯೂ, ಆತನ ಪ್ರೀತಿಯು ಪ್ರತಿಫಲ ಪಡೆದುಕೊಳ್ಳಲಿಲ್ಲ. ದೇವರ ಪ್ರವಾದಿಗಳು ದೇವರಿಗಾಗಿ ಶುದ್ಧ ಪ್ರೀತಿ ಕೊಡಲು ಇಸ್ರಾಯೇಲ್ಯರನ್ನು ಕರೆಯುತ್ತಲೇ ಇದ್ದರು; ಅದರ ಬದಲು ಜನರು, "ಬಾಳ್‌ದೇವತೆಗಳಿಗೆ ಯಜ್ಞಮಾಡಿ ಬೊಂಬೆಗಳಿಗೆ ಧೂಪ ಹಾಕಿದರು" (ಹೋಶೇಯ 11:2). ದೇವರು ಒಳ್ಳೆಯ ತಂದೆಯಾಗಿದ್ದರೂ ಅವರು ಹೀಗೆ ಮಾಡಿದರು: "ನಾನೇ ಎಫ್ರಾಯಿಮಿಗೆ ನಡೆದಾಟವನ್ನು ಕಲಿಸಿದೆನು; ಅದನ್ನು ಕೈಯಲ್ಲಿ ಎತ್ತಿಕೊಂಡೆನು; ತನ್ನನ್ನು ಸ್ವಸ್ಥಮಾಡಿದವನು ನಾನೇ ಎಂದು ಅದಕ್ಕೆ ತಿಳಿಯಲಿಲ್ಲ" (ಹೋಶೇಯ 11:3). ಅವರ ಪಾಪಭರಿತ ಸ್ವಾರ್ಥದಿಂದ ಅವರನ್ನು ದೇವರು ಅವರ ಪ್ರತಿಯೊಂದು ಅಗತ್ಯತೆಯನ್ನ ಪೂರೈಸುವನು ಎಂಬ ಸಂಗತಿಯ ಕಡೆಗೆ ಕುರುಡರನ್ನಾಗಿ ಮಾಡಿತ್ತು, "... ನಾನು ಐಗುಪ್ತ್ಯರಿಗೆ ಉಂಟುಮಾಡಿದ ವ್ಯಾಧಿ ಗಳಲ್ಲಿ ಒಂದನ್ನೂ ನಿಮಗೆ ಬರಗೊಡಿಸುವದಿಲ್ಲ. ಯೆಹೋವನೆಂಬ ನಾನೇ ನಿಮಗೆ ಆರೋಗ್ಯದಾಯಕನು" ಎಂದು ಆತನು ವಾಗ್ದಾನ ಮಾಡಿದನು (ವಿಮೋಚನಕಾಂಡ 15:26). ಅವರ ಕಡೆಗೆ ದೇವರು ತೋರಿಸಿದ ಪ್ರೀತಿಯನ್ನು ಅರ್ಥಮಾಡಿಕೊಳ್ಳು ವದರಲ್ಲಿ ಇಸ್ರಾಯೇಲ್ಯರು ಸೋತುಹೋದರು. "... ನೀವು ಈ ಸ್ಥಳಕ್ಕೆ ಸೇರಿದ ಪರ್ಯಂತರವೂ ನಿಮ್ಮ ಪ್ರಯಾಣದಲ್ಲೆಲ್ಲಾ ಮಗನನ್ನು ತಂದೆ ಹೇಗೋ ಹಾಗೆಯೇ ನಿಮ್ಮ ದೇವರಾದ ಯೆಹೋವನು ನಿಮ್ಮನ್ನು ಹೊತ್ತನಲ್ಲವೇ ಎಂದು ನಿಮಗೆ ಹೇಳಿ ದೆನು" (ಧರ್ಮೋಪದೇಶಕಾಂಡ 1:31). ನಮ್ಮ ಕಡೆಗಿರುವ ಆತನ ಪ್ರೀತಿಯನ್ನು ನೋಡುವದರಲ್ಲಿ ಸೋತು ಹೋಗದಿರೋಣ (ನೋಡಿರಿ 1 ಯೋಹಾನ 3:1).

## ಆತನ ದಯೆ

"... ಕರ್ತನು ಕರುಣಾಸಾಗರನೂ ದಯಾಳುವೂ ಆಗಿದ್ದಾನೆ" ಎಂದು ಯಾಕೋಬ 5:11 ಹೇಳುತ್ತದೆ.

ಮೊದಲನೆಯ ಕೊಲೆಗಾರನು ದಯೆಗಾಗಿ ಕೂಗಿಕೊಂಡಾಗಲೂ, ಕರುಣೆಯಿಂದ

ತುಂಬಿದಾತನು ಬೇಡಿಕೆಯನ್ನು ಕೇಳಿ ಅವನ ಸುರಕ್ಷಿತತೆಗಾಗಿ ಅವನ ಮೇಲೆ ಒಂದು ಗುರುತನ್ನು ಇಟ್ಟನು (ಆದಿಕಾಂಡ 4:15). ದೇವರು ಎಂದೂ ಶಿಕ್ಷಿಸಲು ಬಯಸಿದವನಲ್ಲ; ಆತನು ಯಾವಾಗಲೂ ಆಶೀರ್ವದಿಸಲು ಬಯಸಿದ್ದಾನೆ.

> ಕರ್ತನಾದ ಯೆಹೋವನು ಇಂತೆನ್ನುತ್ತಾನೆ, "ದುಷ್ಟನ ಸಾವಿನಲ್ಲಿ ನನಗೆ ಲೇಶವಾದರೂ ಸಂತೋಷವುಂಟೋ? ಅವನು ತನ್ನ ದುರ್ಮಾರ್ಗವನ್ನು ಬಿಟ್ಟು ಬಾಳುವುದೇ ನನಗೆ ಸಂತೋಷ. ... ಸಾವಿನಲ್ಲಿ ನನಗೆ ಸಂತೋಷವಿಲ್ಲ;" "ತಿರುಗಿಕೊಂಡು ಬಾಳಿರಿ;" ಇದು ಕರ್ತನಾದ ಯೆಹೋವನ ನುಡಿ (ಯೆಹೆಜ್ಕೇಲ 18:23-32).

2 ಪೂರ್ವಕಾಲವೃತ್ತಾಂತ 30ನೆಯ ಅಧ್ಯಾಯದಲ್ಲಿ, ಎಫ್ರಾಯಿಮ್, ಮನಸ್ಸೆ ಇಸ್ಸಾಕಾರ್ ಜೆಬುಲೂನ್ ಪ್ರಾಂತ್ಯಗಳವರು ತಮ್ಮನ್ನು ಶುದ್ಧಿಪಡಿಸಿಕೊಳ್ಳದೇ ಧರ್ಮಶಾಸ್ತ್ರಕ್ಕೆ ವಿರುದ್ಧವಾದ ರೀತಿಯಿಂದ ಫಸ್ಕ ಭೋಜನವನ್ನು ಮಾಡಿದಾಗ, ಹಿಜ್ಕೀಯನು ಅವರಿಗಾಗಿ ಪ್ರಾರ್ಥಿಸಿದನು: "ಯೆಹೋವನೇ, ದಯಾಪರನಾದ ದೇವರೇ, ದೇವಾಲಯ ಯಾತ್ರಿಕ ರಾಗಿರಬೇಕಾದ ಪರಿಶುದ್ಧಾತ್ಮವು ಅನೇಕರಲ್ಲಿ ಇಲ್ಲದಿದ್ದರೂ ಪಿತೃಗಳ ದೇವರಾದ ನಿನ್ನನ್ನು ಹುಡುಕಬೇಕೆಂದು ಮನಸ್ಸುಮಾಡಿರುವ ವರಿಗೆಲ್ಲಾ ಕ್ಷಮೆಯನ್ನೂ ಅನುಗ್ರಹಿಸು" (ವಚನಗಳು 18, 19). "ಕರ್ತನು ಹಿಜ್ಕೀಯನ ಪ್ರಾರ್ಥನೆಯನ್ನು ಲಾಲಿಸಿ ಜನರನ್ನು ಸ್ವಸ್ಥಗೊಳಿಸಿದನು" ಎಂದು ವಚನ 20ರಲ್ಲಿ ಓದುತ್ತೇವೆ.

ದೇವರ ಮೃದುವಾದ ದಯೆಯ ಸುಂದರವಾದ ಮತ್ತು ಆದರಣೆಯ ಬೋಧನೆಯು ದುರುಪಯೋಗ ಪಡಿಸಲ್ಪಟ್ಟಿದ್ದು ದುರ್ದೈವದ ಸಂಗತಿಯಾಗಿದೆ. "ಆತನು ಪ್ರೀತಿಸುವಂತೆ ಪ್ರೀತಿಸುವ ಯಾವುದೇ ದೇವರು ಯಾರನ್ನೂ - ಎಷ್ಟೇ ದುಷ್ಟರಾಗಿದ್ದರೂ - ಸದಾಕಾಲಕ್ಕೂ ಸುಟ್ಟು ಹೋಗಲಿಕ್ಕೆ ಬಿಟ್ಟು ಕೊಡುವದಿಲ್ಲ" ಎಂದು ಅನೇಕರು ಹೇಳಿದ್ದಾರೆ. ಸತ್ಯದಲ್ಲಿ, ದೇವರ ದಯೆಗೆ ಮಿತಿಯಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. 2 ಪೇತ್ರ 2ನೆಯ ಅಧ್ಯಾಯದಲ್ಲಿ ನಾವು ಹೀಗೆ ಓದುತ್ತೇವೆ, "ದೇವದೂತರು ಪಾಪಮಾಡಿದಾಗ ದೇವರು ಅವರನ್ನು ಸುಮ್ಮನೆ ಬಿಡದೆ ನರಕಕ್ಕೆ ದೊಬ್ಬಿ ನ್ಯಾಯ ತೀರ್ಪನ್ನು ಹೊಂದುವದಕ್ಕೆ ಇಡಲ್ಪಟ್ಟವರಾಗಿರಬೇಕೆಂದು ಕತ್ತಲೇ ಗುಂಡಿಗಳಿಗೆ ಒಪ್ಪಿಸಿದನು" (ವಚನ 4). ಆತನು ಪುರಾತನರ ಲೋಕವನ್ನು ಸುಮ್ಮನೇ ಬಿಡಲಿಲ್ಲ (ವಚನ 5), ಆದರೆ ಭಕ್ತಿಹೀನರ ಜಗತ್ತಿನ ಮೇಲೆ ಜಲಪ್ರಳಯವನ್ನು ಬರಮಾಡಿದನು, ಅದನ್ನು ಮಾಡುವಾಗ ಆತನಿಗೆ ನೋವಾಯಿತು, ಆದರೆ ಅದು ಅವಶ್ಯಕವಾಗಿತ್ತು.

ದೇವರು ಸೊದೋಮ ಗೊಮೋರ ಪಟ್ಟಣಗಳನ್ನು ಸುಟ್ಟು ಬೂದಿ ಮಾಡಿದನು (ವಚನ 6). ಅದನ್ನು ಆತನು ಬಯಸಿದನೋ? ಆತನು ಬಹಳ ಆಸಕ್ತಿಯಿಂದ ಅಬ್ರಹಾಮನ ಪ್ರಾರ್ಥನೆಗೆ ಕಿವಿ ಕೊಟ್ಟನು, "ಐವತ್ತು ಜನ ನೀತಿವಂತರು ಇದ್ದರೆ ಅವರನ್ನು ಉಳಿಸುವಿಯೋ?" "ಹೌದು" "ನಾಲವತ್ತೈದು ಜನರು ಇದ್ದರೆ?" "ಹೌದು." "ನಾಲ್ವತ್ತು ... ಮೂವತ್ತು ... ಹತ್ತು ಜನರಿಗಾಗಿ?" "ಹೌದು." ಆ ಸಂಖ್ಯೆಯಷ್ಟು ನೀತಿವಂತರು ಅಲ್ಲಿ ಸಿಕ್ಕಲಿಲ್ಲ. ಉರಿಯುವ ಬೆಂಕಿ, ಗಂಧಕಗಳು ಆಕಾಶದಿಂದ ಬಂದವು, ಮತ್ತು ನಾಶನದ ದೃಶ್ಯವು ಬಹುದೊಡ್ಡ ಬೆಂಕಿಯ ಕುಲುಮೆಯಂತಿತ್ತು.

ದೇವರು ಯಾರನ್ನೂ ಎಂದೂ ನರಕಕ್ಕೆ ಕಳುಹಿಸಿರುವದಿಲ್ಲ; ಪ್ರತಿಯೊಬ್ಬರನ್ನು ಅಲ್ಲಿಗೆ ಹೋಗದಂತೆ ದೇವರು ತಡೆಯಲು ತನ್ನ ಪಾತ್ರವನ್ನು ಮಾಡಿದ್ದಾನೆ ಮತ್ತು ಮಾಡುತ್ತಿದ್ದಾನೆ. ಆತನು ತನ್ನ ಒಬ್ಬನೇ ಮಗನ ಜೀವವನ್ನು ಕೊಡುವಷ್ಟು ದುಷ್ಟ

ಮಾನವ ಜನಾಂಗವನ್ನು ಪ್ರೀತಿಸಿದ್ದಾನೆ (ಯೋಹಾನ 3:16).

ನರಕದ ಅಸ್ತಿತ್ವವು ದೇವರ ಕನಿಕರಕ್ಕೆ ಮತ್ತು ಮೃದುವಾದ ದಯೆಗೆ ವಿರುದ್ಧ ವಾಗಿವಾದಿಸುವದಿಲ್ಲ. ದೈವಿಯ ಕನಿಕರವನ್ನು ತಿರಸ್ಕರಿಸುವ ಮತ್ತು ರಕ್ಷಿಸಲ್ಪಡದೆ ಇರುವದರ ಅಪಕಾರದ ಮತ್ತು ದ್ವೇಷಿಸುವದರ ಸಾಕ್ಷಿ ಅದಾಗಿದೆ.

## ಆತನ ದಯಾಶೀಲತೆ

"ಯಾರನ್ನೂ ದೂಷಿಸದೆ, ಕುತರ್ಕ ಮಾಡದೆ ಎಲ್ಲಾ ಮನುಷ್ಯರಿಗೆ ಪೂರ್ಣ ಸಾಧು ಗುಣವನ್ನು ತೋರಿಸುತ್ತಾ ಸಾತ್ವಿಕರಾಗಿರಬೇಕೆಂತಲೂ" ಕ್ರೈಸ್ತರಿಗೆ ಹೇಳಲ್ಪಟ್ಟಿದೆ (ತೀತ 3:1, 2).

ದಯಾಶೀಲತೆ ಎಂದು ಕರೆಯಲ್ಪಡುವ ಗುಣವು ಎಲ್ಲಾ ಒಳ್ಳೇ ಜನರಿಂದಲೂ ದೇವರಿಂದಲೂ ಮೆಚ್ಚಲ್ಪಟ್ಟಿರುತ್ತದೆ. ಇದಕ್ಕೆ ವಿರುದ್ಧವಾದ, ಕಠಿಣತೆಗೆ ಆತ್ಮನ ಫಲಗ ಳನ್ನು ತೋರಿಸುವವರೊಳಗೆ ಸ್ಥಾನವಿಲ್ಲ, ಒಬ್ಬನು ದಯಾಶೀಲ ಮನುಷ್ಯನೆಂದು ವರ್ಣಿಸಲ್ಪಟ್ಟಾಗ ಹಲವಾರು ಉತ್ತಮ ಗುಣಗಳು ಪ್ರಕಟಿಸಲ್ಪಡುತ್ತವೆ: ಪ್ರಮಾಣಿಕತೆ, ಜ್ಞಾನ, ಉದಾರತೆ, ಶೌರ್ಯ ಮತ್ತು ದಯೆ ಇವುಗಳು ಒಳಗೊಂಡಿರುತ್ತವೆ. ವಿಚಾರಭರಿತತೆಯೂ ಹಾಗೂ ಯೋಚಿಸಲ್ಪಡುವುದೂ ದಯಾಶೀಲತೆಯ ಭಾಗವಾಗಿ ರುತ್ತವೆ.

ಕ್ರೈಸ್ತರು ದಯಾಶೀಲತೆಯನ್ನು ಬೆಳಸಿಕೊಳ್ಳಬೇಕು, ಯಾಕಂದರೆ ಅದು ನಮ್ಮ ತಂದೆಯಾದ ದೇವರ ಗುಣಲಕ್ಷಣವಾಗಿರುತ್ತದೆ. ನಮ್ಮನ್ನು ಉಂಟುಮಾಡಿದಾತನಿಗೆ ನಾವು ಎಷ್ಟನ್ನು ಕೊಡ ಬೇಕಾಗಿರುವುದು ಮತ್ತು ನಾವು ಎಷ್ಟು ಪಾಪಭರಿತರಾಗಿದ್ದೇವೆ ಎಂಬುದನ್ನು ಅರಿತುಕೊಳ್ಳುವಾಗ, ನಾವು ದೀನತೆಯಿಂದ ಎಲ್ಲಾ ಜನರ ಕಡೆಗೆ ತಿರುಗ ಬೇಕು. ದಾವೀದನು ತನ್ನ ಪ್ರಗತಿಯನ್ನು ದೇವರ ದಯಾಶೀಲತೆಗೆ ಅನ್ವಯಿಸಿದನು, "ನಿನ್ನ ಕೃಪಾಕಟಾಕ್ಷವು ನನಗೆ ದೊಡ್ಡಸ್ತಿಕೆಯನ್ನು ಉಂಟುಮಾಡಿದೆ" (ಕೀರ್ತನೆ 18:35).

ದೇವರು ಕಾಯಿನನೊಂದಿಗೆ ಮಾತಾಡಿದಾಗ ದಯಾಶೀಲತೆಯುಳ್ಳವನಾಗಿದ್ದನು: "ಯಾಕೆ ಕೋಪಿಸಿಕೊಂಡಿ? ನಿನ್ನ ತಲೆ ಯಾಕೆ ಬೊಗ್ಗಿತು? ಒಳ್ಳೇ ಕೆಲಸ ಮಾಡಿದರೆ ನಿನ್ನ ತಲೆ ಎತ್ತಲ್ಪಡುವದಲ್ಲವೇ: ಅಲ್ಲದಿದ್ದರೆ ಪಾಪವು ನಿನ್ನನ್ನು ಹಿಡಿಯಬೇಕೆಂದು ಬಾಗಿಲಲ್ಲಿ ಹೊಂಚಿಕೊಂಡಿರುವದು; ... ನೀನು ಅದನ್ನು ವಶಮಾಡಿಕೊಳ್ಳಬೇಕು" (ಆದಿಕಾಂಡ 4:6, 7).

ನಾವಿರಬೇಕೆಂದು ದೇವರು ಬಯಸುವಂತೆ ನಾವು ಹೆಚ್ಚು ಪ್ರೀತಿಸುವವರೂ ಕರುಣೆಯುಳ್ಳವರೂ ದೀನರೂ ಆಗಲು ಪ್ರಾರ್ಥಿಸೋಣ.

---

ಟಿಪ್ಪಣಿ

[1]C. F. Keil and F Delitzsch, *Commentaries on the Old Testament,* vol. X, *Minor Prophets* (Grand Rapids, Mich.: Wm. B. Eerdmans Publishing Co., n.d.), 138.

© 2009 Truth for Today